8. **ಅರ್ಹತಾ ಷರತ್ತುಗಳು:**

a. ಭಾರತೀಯ ನಾಗರಿಕನಾಗಿರತಕ್ಕದ್ದು.
b. ಅಭ್ಯರ್ಥಿಯು ಮಾನಸಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರು ನೇಮಕಾತಿಯಾದ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಅಡಚಣೆ ಉಂಟು ಮಾಡುವ ಸಂಭವವಿರುವ ಯಾವುದೇ ಮಾನಸಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.
c. ದೃಢಕಾಯವಾಗಿರುವ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. ಭೂಮಾಪನ ಕಾರ್ಯ ಕೈಗೊಳ್ಳಬೇಕಿರುವುದರಿಂದ ಎಂತಹ ಮೇಲ್ಮೈ ಲಕ್ಷಣಗಳಿದ್ದರೂ ಅಳತೆ ಮಾಡುವ ದೈಹಿಕ ಸಾಮರ್ಥ್ಯ ಹೊಂದಿರಬೇಕು. (ಅರಣ್ಯ, ಎತ್ತರ/ತಗ್ಗು, ಜನ ಸಂಚಾರ ಇಲ್ಲದ ಪ್ರದೇಶ, ಹಳ್ಳ ಕೊಳ್ಳದ ಪ್ರದೇಶ ಇತ್ಯಾದಿ)
d. ಇಲಾಖೆಯಿಂದ ಈಗಾಗಲೇ ಪರವಾನಗಿ ಪಡೆದು ಕಾರ್ಯ ನಿರ್ವಹಿಸುತ್ತಿರುವವರು ಹಾಗೂ ಬೇರೆ ಕಾರಣಗಳಿಂದ ಪರವಾನಗಿ ರದ್ದಾಗಿದ್ದಲ್ಲಿ ಅಂತಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಒಂದು ವೇಳೆ ಅಂತಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದಲ್ಲಿ ಅಂತಹವರ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
e. ಭೂದಾಖಲೆಗಳನ್ನು ಕನ್ನಡ ಭಾಷೆಯಲ್ಲಿ ತಯಾರಿಸಬೇಕಾದ ಕಾರಣ ಅಭ್ಯರ್ಥಿಯು ಎಸ್.ಎಸ್.ಎಲ್.ಸಿ / ತತ್ಸಮಾನ ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ / ದ್ವಿತೀಯ ಭಾಷೆಯಾಗಿ ಪಡೆದು ತೇರ್ಗಡೆ ಹೊಂದಿರಬೇಕು.

9. **ಜಿಲ್ಲಾವಾರು ಅವಶ್ಯಕವಿರುವ ಪರವಾನಗಿ ಭೂಮಾಪಕರ ಸಂಖ್ಯೆ:**

ಈ ಕೆಳಗೆ ನೀಡಿರುವ ಪಟ್ಟಿಯಂತೆ ವಿವಿಧ ಜಿಲ್ಲೆಗಳಿಗೆ ಪರವಾನಗಿ ಭೂಮಾಪಕರ ಅವಶ್ಯಕತೆ ಇರುತ್ತದೆ. ಪಟ್ಟಿಯಲ್ಲಿ ನೀಡಿರುವ ಜಿಲ್ಲೆಗಳು ಮತ್ತು ವಿತರಿಸಲಾಗುವ ಪರವಾನಗಿಗಳ ಸಂಖ್ಯೆಯು ಇಲಾಖೆಯ ಅವಶ್ಯಕತೆಗನುಗುಣವಾಗಿ ಬದಲಾವಣೆಗೊಳಪಟ್ಟಿರುತ್ತದೆ.

| ಕ್ರ.ಸಂ. | ಜಿಲ್ಲೆಯ ಹೆಸರು | ಅಗತ್ಯವಿರುವ ಪರವಾನಗಿ ಭೂಮಾಪಕರುಗಳ ಸಂಖ್ಯೆ |
|---|---|---|
| 1. | ಬೆಂಗಳೂರು ನಗರ | 42 |
| 2. | ಬೆಂಗಳೂರು ಗ್ರಾಮಾಂತರ | 92 |
| 3. | ಚಿಕ್ಕಬಳ್ಳಾಪುರ | 34 |
| 4. | ರಾಮನಗರ | 100 |
| 5. | ಕೋಲಾರ | 52 |
| 6. | ತುಮಕೂರು | 138 |
| 7. | ಶಿವಮೊಗ್ಗ | 45 |
| 8. | ದಾವಣಗೆರೆ | 78 |
| 9. | ಚಿತ್ರದುರ್ಗ | 70 |
| 10. | ಮೈಸೂರು | 41 |
| 11. | ಚಾಮರಾಜನಗರ | 14 |
| 12. | ಮಂಡ್ಯ | 110 |
| 13. | ಹಾಸನ | 120 |
| 14. | ಕೊಡಗು | 4 |
| 15. | ಉಡುಪಿ | 130 |
| 16. | ದಕ್ಷಿಣ ಕನ್ನಡ | 82 |

| ಕ್ರ.ಸಂ. | ಜಿಲ್ಲೆಯ ಹೆಸರು | ಅಗತ್ಯವಿರುವ ಪರವಾನಗಿ ಭೂಮಾಪಕರುಗಳ ಸಂಖ್ಯೆ |
|---|---|---|
| 17. | ಚಿಕ್ಕಮಗಳೂರು | 51 |
| 18. | ಬೆಳಗಾವಿ | 152 |
| 19. | ಬಾಗಲಕೋಟೆ | 47 |
| 20. | ವಿಜಯಪುರ | 104 |
| 21. | ಗದಗ್ | 58 |
| 22. | ಧಾರವಾಡ | 20 |
| 23. | ಉತ್ತರ ಕನ್ನಡ | 60 |
| 24. | ಹಾವೇರಿ | 30 |
| 25. | ಕಲ್ಬುರ್ಗಿ | 96 |
| 26. | ಬೀದರ್ | 49 |
| 27. | ರಾಯಚೂರು | 138 |
| 28. | ಕೊಪ್ಪಳ | 49 |
| 29. | ಯಾದಗಿರಿ | 56 |
| 30. | ಬಳ್ಳಾರಿ | 10 |
| | ಒಟ್ಟು | **2072** |

10. **ಆಯ್ಕೆಯ ವಿಧಾನಃ**

2 ವಿಷಯಗಳಲ್ಲಿ ತಲಾ 100 ಅಂಕಗಳಿಗೆ, ವಸ್ತುನಿಷ್ಟ ಬಹು ಆಯ್ಕೆಯ (**Objective Multiple Choice**) ಪ್ರಶ್ನೆಗಳನ್ನೊಳಗೊಂಡಂತೆ ಪ್ರತ್ಯೇಕ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಿಗದಿಪಡಿಸಿದ ಕೇಂದ್ರಗಳಲ್ಲಿ ರಾಜ್ಯದಲ್ಲಿ ಒಂದೇ ದಿನದಂದು OnlineTest ಮೂಲಕ ಅಥವಾ ಲಿಖಿತ ಪರೀಕ್ಷೆ ಮೂಲಕ ನಡೆಸಲಾಗುವುದು. ಉತ್ತರವನ್ನು OnlineTest ಮೂಲಕ ಅಥವಾ **OMR** ಶೀಟಿನಲ್ಲಿ ಗುರುತಿಸಬೇಕಾಗಿರುತ್ತದೆ. ಅಭ್ಯರ್ಥಿಗಳು ಈ ಪರೀಕ್ಷೆಯಲ್ಲಿ ಪಡೆಯುವ ಗರಿಷ್ಟ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. **ಈ ಆಯ್ಕೆಗೆ ಯಾವುದೇ ಸಂದರ್ಶನ ಇರುವುದಿಲ್ಲ.**

ಜಿಲ್ಲಾವಾರು ಮೆರಿಟ್ ಪಟ್ಟಿ ಮಾಡಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಅಭ್ಯರ್ಥಿಯು ಅರ್ಜಿ ಸಲ್ಲಿಸುವಾಗ ತಾನು ಆಯ್ಕೆ ಬಯಸುವ ಯಾವುದಾದರೂ ಒಂದು ಜಿಲ್ಲೆಯನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬಹುದು. ಆಯ್ಕೆ ಬಯಸಿದ ಜಿಲ್ಲೆಯನ್ನು ಹೊರತುಪಡಿಸಿ ಬೇರೆ ಜಿಲ್ಲೆಗೆ ಅಭ್ಯರ್ಥಿತನವನ್ನು ಪರಿಗಣಿಸುವುದಿಲ್ಲ.

(1) **ಸ್ಪರ್ಧಾತ್ಮಕ ಪರೀಕ್ಷೆ ವಿವರಃ (ಎಸ್.ಎಸ್.ಎಲ್.ಸಿ. ಜ್ಞಾನಮಟ್ಟಕ್ಕೆ)**

**ಪತ್ರಿಕೆ-1** (ಸಾಮಾನ್ಯ ಪತ್ರಿಕೆ) – 100 ಅಂಕಗಳು

**(General Paper)** – ಪರೀಕ್ಷಾ ಕಾಲಾವಧಿ – 2 ಗಂಟೆ

ಈ ಪತ್ರಿಕೆಯು ಕರ್ನಾಟಕದ ಹಾಗೂ ಭಾರತದ ಇತಿಹಾಸ, ರಾಜ್ಯಶಾಸ್ತ್ರ, ಸಾಮಾನ್ಯ ಜ್ಞಾನ ಹಾಗೂ ಇತ್ತೀಚಿನ ವಿದ್ಯಾಮಾನಗಳ ಅರಿವು, ಸಾಮಾನ್ಯ ವಿಜ್ಞಾನ ಹಾಗೂ ದಿನನಿತ್ಯದ ಆಗು-ಹೋಗುಗಳು ಮತ್ತು ಪ್ರಾಯೋಗಿಕ ಜ್ಞಾನದ ಕುರಿತಂತೆ ಪರೀಕ್ಷಾ ಪತ್ರಿಕೆಯಾಗಿರುತ್ತದೆ.

(2016 ರ ವರ್ಷದಲ್ಲಿ LS ಪರೀಕ್ಷೆಯಲ್ಲಿ ಉಪಯೋಗಿಸಿರುವ ಪ್ರಶ್ನೆ ಪತ್ರಿಕೆ ಅನುಬಂಧ-1 ರಲ್ಲಿ ನೀಡಲಾಗಿದೆ)



2/12/19